## 20. ರಾಜ್ಯದಲ್ಲಿ 2 ತಿಂಗಳಲ್ಲಿ ಸಿಡಿಲು, ಗಾಳಿ–ಮಳೆ ಆರ್ಭಟಕ್ಕೆ 50 ಬಲಿ

ಕರುನಾಡಿನಲ್ಲಿ ಕಳೆದ ಎರಡು ತಿಂಗಳಲ್ಲಿ ಮಳೆ–ಗಾಳಿ, ಸಿಡಿಲಿಗೆ ಬರೋಬ್ಬರಿ 50 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ 46 ಮಂದಿ ಸಿಡಿಲು ಬಡಿದು ಅಸು ನೀಗಿದ್ದಾರೆ. ಪೂರ್ವ ಮುಂಗಾರು ಮತ್ತು ಮುಂಗಾರು ಅವಧಿಯಲ್ಲಿ (ಏಪ್ರಿಲ್ 1 ರಿಂದ ಜೂನ್ 13) ರಾಜ್ಯದ 30 ಜಿಲ್ಲೆಗಳ ಪೈಕಿ 20 ಜಿಲ್ಲೆಗಳಲ್ಲಿ ಬರೋಬ್ಬರಿ 50 ಮಂದಿ ಮಳೆ, ಗಾಳಿ, ಸಿಡಿಲು ಅನಾಹುತಗಳಿಗೆ ಬಲಿಯಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಡಿಆರ್‌ಎಫ್) ಮಾಹಿತಿ ನೀಡಿದೆ. ಇದರಲ್ಲಿ ಅತಿ ಹೆಚ್ಚು ಮಂದಿ ಅಂದರೆ 46 ಮಂದಿ ಸಿಡಿಲಿಗೆ ಬಲಿಯಾಗಿದ್ದಾರೆ.

ಮಳೆ–ಗಾಳಿ ಅನಾಹುತಕ್ಕೆ ಬರೋಬ್ಬರಿ 206 ಕುರಿ, ಕೋಳಿ, ಹಸು, ಎತ್ತು, ಮೇಕೆ ಸೇರಿದಂತೆ ಇನ್ನಿತರ ಪ್ರಾಣಿಗಳು ಬಲಿಯಾಗಿವೆ. ಇನ್ನು 155 ಮನೆಗಳು ನೆಲಸಮವಾಗಿವೆ. 2,478 ಮನೆಗಳು ಭಾಗಶಃ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:22.06.2020